ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,
ಸವಣೂರ.
ಅಪರಾಧ ಮೊಕದ್ದಮೆ ಸಂಖ್ಯೆಃ 297/2016

ಫಿರ್ಯಾದಿದಾರಃ ಪಿ.ಎಸ್.ಐ. ಸವಣೂರ ಪಿಎಸ್.

ವಿರುದ್ಧ

ಆರೋಪಿಃ ಸಲೀಂಅಹ್ಮದ ಉರ್ಫ ನನ್ನೆಮಿಯಾ ತಂದೆಃ ಖಾಜಾಮೋದಿನ ಬನ್ನೂರ 38 ವರ್ಷ, ಸಾಃ ಸವಣೂರ ಲಾಲಸಗಟ್ಟಿ ಓಣಿ, ತಾಃ ಸವಣೂರ, ಜಿಃ ಹಾವೇರಿ.

ದೋಷಾರೋಪಣೆ

ನಾನು ಬಾಳಾಸಾಹೇಬ ವಡವಡೆ, ಸಿವ್ಹಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ.ಗಳು ಸವಣೂರ, ಮೇಲ್ಕಾಣಿಸಿದ ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ಸವಣೂರ ಪೊಲೀಸ್ ಠಾಣೆ ಹದ್ದಿ ಪೈಕಿ ಸವಣೂರ ಶಹರದ ಲಾಲಸಗಟ್ಟಿ ಓಣಿಯಲ್ಲಿ ದಿನಾಂಕ 09-07-2015 ರಂದು ಮದ್ಯಾಹ್ನ 12.00 ಘಂಟೆ ಸುಮಾರಿಗೆ ಆರೋಪಿಯಾದ ನೀವು ವೈದ್ಯಕೀಯ ವೃತ್ತಿ ನಡೆಸಲು ಅಧೀಕೃತ ಅಧಿಕಾರಿಗಳಿಂದ ಪರವಾನಿಗೆ ಪತ್ರ ಪಡೆಯದೇ, ನಿಮ್ಮ ವೈಯಕ್ತಿಕ ಲಾಭಕ್ಕಾಗಿ ಸವಣೂರ ಶಹರದ ಲಾಲ್ಸಾಗಟ್ಟಿ ಓಣಿಯಲ್ಲಿರುವ ನಿಮ್ಮ ಕ್ಲಿನಿಕ್‌ದಲ್ಲಿ ಸಾರ್ವಜನಿಕರಿಗೆ ನೀವು ವೈದ್ಯರು ಅಂತಾ ನಂಬಿಕೆ ಬರುವಂತೆ ಮೋಸ ಮಾಡಿ, ವಂಚಿಸಿ ಸಾರ್ವಜನಿಕರಿಂದ ದುಡ್ಡು ಪಡೆದುಕೊಂಡು, ಸಾರ್ವಜನಿಕರಿಗೆ ವೈದ್ಯಕೀಯ ಚಿಕಿತ್ಸೆ ನೀಡುತ್ತಿರುವಾಗ, ವೈದ್ಯಕೀಯ ವೃತ್ತಿ ಮಾಡುವ ಸಲಕರಣೆಗಳು ಹಾಗೂ ಔಷಧಿಗಳೊಂದಿಗೆ ಸಿಕ್ಕಿದ್ದು ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 417 ಮತ್ತು 420 ಮತ್ತು 38 ಮತ್ತು 40(2) ಕರ್ನಾಟಕ ಆಯುರ್ವೇದಿಕ್ ಮತ್ತು ಯೂನಾನಿ ಪ್ರಾಕ್ಟ.ರಿಜಿಸ್ಟ್ರೇಷನ್ ಮತ್ತು ಮೆಡಿಕಲ್ ಪ್ರಾಕ್ಟಿಸಿನರ್ ಮಿಸಲೇನಿಯಸ್ ಪ್ರೊವಿಷನ್ ಆ್ಯಕ್ಟ್ 1961 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು ನನ್ನ ಸಂಜ್ಞಾನಕ್ಕೆ ಬಂದಿದೆ.

ಆದ್ದರಿಂದ, ಈ ಮೇಲ್ಕಂಡ ಎಲ್ಲಾ ಅಪರಾಧಕ್ಕಾಗಿ ಈ ನ್ಯಾಯಾಲಯದಲ್ಲಿ ನೀವು ವಿಚಾರಣೆ ಎದುರಿಸತಕ್ಕದ್ದೆಂದು ಈ ಮೂಲಕ ಆದೇಶಿಸುತ್ತೇನೆ.

(ಬಾಳಾಸಾಹೇಬ ವಡವಡೆ)
ಸಿ.ನ್ಯಾ ಮತ್ತು ಪ್ರ.ದ.ನ್ಯಾ.ದಂ.ಗಳು
ಸವಣೂರ.

ಸವಣೂರ
ದಿನಾಂಕಃ 28-03-2017.

<u>ಆರೋಪಿಯ ಉತ್ತರ</u>

ಪ್ರಶ್ನೆಃ1) ಈಗ ನಿನಗೆ ಓದಿ ಹೇಳಿದ ದೋಷಾರೋಪಣೆಯ/ಆಪಾದನೆಯ ಸಾರಾಂಶ ತಿಳಿಯಿತೇ?
ಉತ್ತರಃ

ಪ್ರಶ್ನೆಃ2) ಈ ದೋಷಾರೋಪಣೆ/ಅಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರಾ?
ಉತ್ತರಃ

(ಈ ಮೇಲಿನ ದೋಷಾರೋಪಣೆ/ಆಪಾದನೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ ಆರೋಪಿ ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿದೆ ಎಂದು ಪ್ರಮಾಣೀಕರಿಸುತ್ತೇನೆ.)

ಆರೋಪಿ ಸಹಿ

ಸಿ.ನ್ಯಾ. ಮತ್ತು ಪ್ರ. ದ. ನ್ಯಾ. ದಂ.ಗಳು
ಸವಣೂರ.

ಸವಣೂರ
ದಿನಾಂಕಃ 28-03-2017.